ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE: 30/1/21

# ಕಲಾಪ ಸಮಿತಿ ಸಭೆಗೆ ಸಿದ್ದರಾಮಯ್ಯ ಬಹಿಷ್ಕಾರ

## ನಿಮ್ಮ ಮನಸ್ಸಿಗೆ ಬಂದಂತೆ ಕಲಾಪ ನಡೆಸುವುದಾದರೆ ನಾವೇಕೆ ಸಭೆಗೆ ಬರಬೇಕು?: ಖಡಕ್ ಪ್ರಶ್ನೆ

## ಸಿಎಂ ಬಿಎಸ್‌ವೈ ಮನವೊಲಿಕೆಗೆ ಬಗ್ಗದ ವಿಪಕ್ಷ ನಾಯಕ । ನಾಡಿದ್ದು ಮತ್ತೆ ಸಭೆ: ಸ್ಪೀಕರ್ ಕಾಗೇರಿ

30/1/21

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಆಡಳಿತ ಪಕ್ಷದ ಪ್ರಮುಖರ ಮನವೊಲಿಕೆಗೆ ಜಗ್ಗದ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಶುಕ್ರವಾರ ನಡೆಯಬೇಕಿದ್ದ ಕಲಾಪ ಸಲಹಾ ಸಮಿತಿ(ಬಿಎಸಿ) ಸಭೆಯನ್ನು ಬಹಿಷ್ಕರಿಸಿದರು. ಪರಿಣಾಮ ಸಭೆಯನ್ನು ಸೋಮವಾರ ನಡೆಸುವುದಾಗಿ ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರಕಟಿಸಿದರು.

ಶುಕ್ರವಾರ ಬೆಳಗ್ಗೆ ಸದನದ ಕಲಾಪ ಆರಂಭವಾಗುವ ಮೊದಲು ಕಾಗೇರಿ ಕಲಾಪ ಸಲಹಾ ಸಮಿತಿ ಸಭೆ ಕರೆದಿದ್ದರು. ಗುರುವಾರವೇ ಈ ಬಗ್ಗೆ ಸಭಾಧ್ಯಕ್ಷರಿಗೆ ಪತ್ರ ಬರೆದಿದ್ದ ಸಿದ್ದರಾಮಯ್ಯ, ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯು ಈ ಸರ್ಕಾರದಲ್ಲಿ ತನ್ನೆಲ್ಲಾ ಪಾವಿತ್ರ್ಯತೆ ಕಳೆದುಕೊಂಡಿದೆ. ಹೀಗಾಗಿ ಸಭೆಯನ್ನು ಬಹಿಷ್ಕರಿಸಿದ್ದೇವೆ ಎಂದು ಹೇಳಿದ್ದರು.



### ಸೋಮವಾರ ಸಭೆ

ಸದನ ಆರಂಭವಾದ ಬಳಿಕ ಈ ಬಗ್ಗೆ ಪ್ರಕಟಿಸಿದ ವಿಶ್ವೇಶ್ವರ ಹೆಗಡೆ ಕಾಗೇರಿ, ಸದನ ಕಲಾಪ ಸಲಹಾ ಸಮಿತಿಯನ್ನು ಸೋಮವಾರ ಬೆಳಗ್ಗೆ 10 ಗಂಟೆಗೆ ಕರೆಯಲಾಗಿದೆ. ಎಲ್ಲರೂ ಸಭೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಶುಕ್ರವಾರ ಬೆಳಗ್ಗೆ ಸಿದ್ದರಾಮಯ್ಯ ಅವರ ಮನವೊಲಿಕೆಗೆ ಯತ್ನಿಸಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸಂಧಾನ ಸಭೆ ನಡೆಸಿದರು. ಏನೇ ಸಮಸ್ಯೆಗಳಿದ್ದರೂ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬಹುದು. ಸದನ ಸಲಹಾ ಸಮಿತಿ ಬಹಿಷ್ಕರಿಸುವ ತೀರ್ಮಾನ ಹಿಂಪಡೆಯಿರಿ. ಸರ್ಕಾರಕ್ಕೆ ಅಗತ್ಯ ಸಲಹೆ, ಮಾರ್ಗದರ್ಶನ ನೀಡಬೇಕಿರುವುದು ವಿಪಕ್ಷದ ಜವಾಬ್ದಾರಿ. ನಿಮ್ಮ ಜವಾಬ್ದಾರಿಯನ್ನು ನಿರ್ವಹಿಸಲಾದರೂ ಕಲಾಪ ಸಲಹಾ ಸಮಿತಿ ಸಭೆಗೆ ಬನ್ನಿ ಎಂದು ಮನವೊಲಿಸಲು ಯತ್ನಿಸಿದರು ಎನ್ನಲಾಗಿದೆ.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಿದ್ದರಾಮಯ್ಯ, ನಾವು ಎಲ್ಲವನ್ನೂ ಪರಿಶೀಲಿಸಿಯೇ ಈ ತೀರ್ಮಾನಕ್ಕೆ ಬಂದಿದ್ದೇವೆ. ಕಳೆದ ಎರಡು ಅಧಿವೇಶನಗಳಿಂದ ಬಿಎಸಿ ಸಭೆಯ ನಿರ್ಣಯಗಳಿಗೆ ನಿಮ್ಮ ಸರ್ಕಾರ ನೀಡುತ್ತಿರುವ ಗೌರವ ಏನೆಂಬುದನ್ನು ನೋಡಿದ್ದೇವೆ. ಕಳೆದ ಬಿಎಸಿ ಸಭೆಯಲ್ಲಿ ಪ್ರಸ್ತಾಪಿಸದ ಹಲವು ವಿವಾದಾತ್ಮಕ ಕಾಯಿದೆಗಳನ್ನು ಏಕಾಏಕಿ ಸದನದಲ್ಲಿ ಮಂಡಿಸಿದ್ದೀರಿ. ನಿಮಗೆ ಮನಸ್ಸಿಗೆ ಬಂದಂತೆ ಕಲಾಪ ನಡೆಸುವುದಾದರೆ ಬಿಎಸಿ ಸಭೆಗೆ ನಾವೇಕೆ ಬರಬೇಕು ಎಂದು ಖಾರವಾಗಿ ಪ್ರಶ್ನಿಸಿದರು ಎನ್ನಲಾಗಿದೆ.

ಇನ್ನು ಜೆಡಿಎಸ್‌ನ ಹಿರಿಯರಾದ ಎಚ್.ಡಿ. ಕುಮಾರಸ್ವಾಮಿ, ಎಚ್.ಡಿ. ರೇವಣ್ಣ ಅವರೂ ಆಗಮಿಸಿರಲಿಲ್ಲ. ಹೀಗಾಗಿ ಸಭೆಯನ್ನು ಮುಂದೂಡಲು ನಿರ್ಧರಿಸಲಾಯಿತು ಎಂದು ತಿಳಿದುಬಂದಿದೆ.